

Birla White
SALT BLOCK
ANTI-EFFLORESCENCE PUTTY
ADITYA BIRLA
BUILDING SOLUTIONS
ಗೋಡೆಗಳ ಮೇಲೆ ಉಪ್ಪಿಲ್ಲ,
ಪ್ರೀಮಿಯಂ ಪಳಪಳ
ಹೊಳೆಯುತ್ತಿದೆಯಲ್ಲ!
ಬಿರ್ಲಾ ವೈಟ್ ಸಾಲ್ಟ್ ಬ್ಲಾಕ್
ಆಂಟಿ- ಎಫ್ಲೋರೆಸೆನ್ಸ್ ಪುಟ್ಟಿ
ANTI-EFFLORESCENCE PUTTY
1 ವರ್ಷದ ವಾರಂಟಿ*
40 kg
ಉಪ್ಪು
ಫಾರ್ಮೇಶನ್
ಆಂಟಿ ಎಫ್ಲೋರೆಸೆನ್ಸ್
ವಾಟರ್ ರೆಸಿಸ್ಟೆನ್ಸ್
ಅತ್ಯಧಿಕ ಬಿಳುಪು
* ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.

## ಉತ್ಪನ್ನದ ಬಗ್ಗೆ

# ಬಿರ್ಲಾ ವೈಟ್ ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿ

ಅಡ್ವಾನ್ಸ್‌ಡ್ ವೈಟ್ ಸಿಮೆಂಟ್ ಆಧಾರಿತ ಪುಟ್ಟಿ, ಬಿರ್ಲಾ ವೈಟ್ ಸಾಲ್ಟ್ ಬ್ಲಾಕ್ ಆಂಟಿ–ಎಫ್ಲೋರೆಸೆನ್ಸ್ ಪುಟ್ಟಿ ಅತ್ಯಂತ ಸಾಮಾನ್ಯ ಮತ್ತು ನಿರಂತರ ಗೋಡೆಯ ಸಮಸ್ಯೆಗಳನ್ನು ನಿಭಾಯಿಸುತ್ತದೆ: ಎಫ್ಲೋರೆಸೆನ್ಸ್,

ಮನೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದು ಸಾಮಾನ್ಯ ಘಟನೆ, ಎಫ್ಲೋರೆಸೆನ್ಸ್ ಗೋಡೆಗಳ ಮೇಲೆ ಬಿಳಿ, ಪುಡಿಯಂಥ ಪದರಗಳನ್ನು ಜಮೆಯಾಗಿಸುತ್ತದೆ ಇದು ಹೇಗಾಗುತ್ತದೆ ಅಂದರೆ ಗಾಳಿಗೆ ಒಡ್ಡಿಕೊಂಡಾಗ ಗೋಡೆಯಿಂದ ತೇವಾಂಶ ಹೋಗಿಬಿಡುತ್ತದೆ.

ಹೆಚ್ಚಿನ ಕಾರ್ಯಕ್ಷಮತೆಯ ಸೇರ್ಪಡೆಗಳು ಮತ್ತು ಸಕ್ರಿಯ ಜರ್ಮನ್ ಮೂಲದ ಸಿಲಿಕಾನ್ ಪಾಲಿಮರ್‌ಗಳೊಂದಿಗೆ ರೂಪಿಸಲಾದ ಸಾಲ್ಟ್ ಬ್ಲಾಕ್, ಉಪ್ಪು ಮೈಗ್ರೇಶನ್ ಅನ್ನು ವಿರೋಧಿಸುವ, ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಮತ್ತು ಮೇಲ್ಮೈ ಹಾನಿಯಿಂದ ರಕ್ಷಿಸುವ, ಉತ್ತಮ ಬಿಳಿ ಬಣ್ಣವನ್ನು ಖಚಿತಪಡಿಸುವ ಸಖತ್, ಬಾಳಿಕೆ ಬರುವ ಬೇಸ್ ಅನ್ನು ಇದು ಸೃಷ್ಟಿಸುತ್ತದೆ.




*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.


# ನಾವೀನ್ಯತೆ ಸದಾ ನಿರಂತರವಾಗಿರುತ್ತದೆ.

ಕೆಲವು ಕ್ಯಾಟಗರಿ ಒಂದೆಡೆ ನಿಂತಾಗ, ಬಿರ್ಲಾ ವೈಟ್ ಮುಂದೆ ಸಾಗುತ್ತದೆ. ಆದಕ್ಕಾಗಿಯೇ ನಾವು ಒಂದು ಅನನ್ಯ ಪ್ರಾಡಕ್ಟ್ ಮಾಡಲು ಅದರ ಮೇಲೆ ರಿಸರ್ಚ್ ಮಾಡಲು  ಅದನ್ನು ಡಿಸಾಯಿನ್  ಮಾಡಲು ಮತ್ತು ಅದನ್ನು ಡೆವಲಪ್ ಮಾಡಲು  ತುಂಬಾ ರಿಸರ್ಚ್ ಮಾಡಿದ್ದೇವೆ. ಇದರಿಂದ ಎಫ್ಲೋರೆಸೆನ್ಸ್ ಸಮಸ್ಯೆಯನ್ನು ಎದುರಿಸಬಹುದು. ಭಾರತೀಯ ಮನೆಗಳಲ್ಲಿ ಸಾಮಾನ್ಯವಾಗಿ ಗೋಡೆಗಳು ಎದುರಿಸುವ ಸಮಸ್ಯೆಗಳಲ್ಲಿ ಇದು ಒಂದಾಗಿದೆ.

ನಮ್ಮ ಮೂಲದಲ್ಲಿ ನಾವೀನ್ಯತೆ ಮತ್ತು ಭಾರತೀಯ ಮನೆಗಳನ್ನು ಆರೋಗ್ಯಕರ ಮತ್ತು ಸುರಕ್ಷಿತವಾಗಿಸುವ ಬದ್ಧತೆಯೊಂದಿಗೆ, ಸಾಲ್ಟ್ ಬ್ಲಾಕ್ ಆಂಟಿ–ಎಫ್ಲೋರೆಸೆನ್ಸ್ ಪುಟ್ಟಿಯೊಂದಿಗೆ ಮಾರುಕಟ್ಟೆಯಲ್ಲಿ ಕ್ರಾಂತಿಯನ್ನುಂಟುಮಾಡುತ್ತಿದೆ ಆದಕ್ಕೆ ನಾವು ಹೆಮ್ಮೆಪಡುತ್ತೇವೆ.

ಗ್ರಾಹಕರು, ಗುತ್ತಿಗೆದಾರರು ಮತ್ತು ಪೇಂಟರ್‌ಗೆ ನಿಜವಾದ ಮತ್ತು ಅಗತ್ಯವಿರುವ ಅಗತ್ಯವನ್ನು ಪೂರೈಸುವ ಉತ್ಪನ್ನವಾದ ಸಾಲ್ಟ್ ಬ್ಲಾಕ್ ಆಂಟಿ–ಎಫ್ಲೋರೆಸೆನ್ಸ್ ಪುಟ್ಟಿ ಬಿರ್ಲಾ ವೈಟ್ ಅವರ ಭರವಸೆಯನ್ನು ಇನ್ನಷ್ಟು ಬಲಪಡಿಸುತ್ತದೆ. ಇದು ಗೋಡೆಯ ಬಾಳಿಕೆ ಹೆಚ್ಚಿಸುವ ಮತ್ತು ಮನೆಗಳ ಬಾಳಿಕೆಯನ್ನು ಹೆಚ್ಚಿಸುತ್ತದೆ  ಮತ್ತು ಉದ್ಯಮಕ್ಕೆ ಹೊಸ ಮಾನದಂಡವನ್ನು ಸ್ಥಾಪಿಸುತ್ತದೆ.

## ಸಾಲ್ಟ್ ಬ್ಲಾಕ್ ಆಂಟಿ–ಫ್ಲೋರೆಸೆನ್ಸ್ ಪುಟ್ಟಿಯನ್ನು ಈ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ



**ಉಪ್ಪು ಜಮೆಯಾಗುವುದನ್ನು ಸಕ್ರಿಯವಾಗಿ ವಿರೋಧಿಸುವುದು**



**ಗೋಡೆಗಳಿಗೆ ತೇವಾಂಶದಿಂದ ಆಗುವ ಹಾನಿಯಿಂದ ಕಾಪಾಡುವುದು**



**ಸುದೀರ್ಘ ಸಮಯದವರೆಗೆ ಶಾಶ್ವತ ಮತ್ತು ಅನನ್ಯ ಬಿಳಿ ಬಣ್ಣವನ್ನು ನೀಡುವುದು**




**1 ವರ್ಷದ ಗ್ಯಾರಂಟಿಯನ್ನು ನೀಡುವುದು**

# ಬಿರ್ಲಾ ವೈಟ್ ಸಾಲ್ಟ್ ಬ್ಲಾಕ್‌ನಂತೆ ಬೇರೆ ಯಾವುದೂ ಇಲ್ಲ

## ಉಪ್ಪು ಜಮೆಯಾಗುವುದರಿಂದ ರಕ್ಷಣೆ

ಇದರ ವಿಶೇಷ ಫಾರ್ಮುಲಾ ಉಪ್ಪು ಜಮೆಯಾಗುವುದನ್ನು ತಡೆಯುತ್ತದೆ, ತೇವಾಂಶ ನಷ್ಟವನ್ನು ನಿಯಂತ್ರಿಸುತ್ತದೆ ಮತ್ತು ಬಿಳಿ ಚುಕ್ಕೆಗಳು, ಕಲೆಗಳು ಮತ್ತು ಚೆಕ್ಕೆ ಏಳುವುದನ್ನು ತಡೆಯುತ್ತದೆ. ಈ ಸರ್ವತೋಮುಖ ರಕ್ಷಣೆಯು ಗೋಡೆಗಳನ್ನು ಬಲವಾಗಿ ಮತ್ತು ದೀರ್ಘಕಾಲದವರೆಗೆ ಸುರಕ್ಷಿತವಾಗಿರಿಸುತ್ತದೆ.

## ಹೆಚ್ಚಿನ ನೀರಿನ ಪ್ರತಿರೋಧ ಕ್ಷಮತೆ

ಜರ್ಮನಿಯಲ್ಲಿ ತಯಾರಿಸಿದ ಸಕ್ರೀಯ ಸಿಲಿಕಾನ್ ಪಾಲಿಮರ್‌ಗಳನ್ನು ಇದರ ಮಿಶ್ರಣಕ್ಕೆ ಸೇರಿಸಲಾಗುವುದು ಇದು ರಚನಾತ್ಮಕ ಪದರವನ್ನು ರೂಪಿಸುತ್ತದೆ ಈ ಪದರವು ತೇವಾಂಶವನ್ನು ಹಿಡಿದಿಟ್ಟುಕೊಳ್ಳುತ್ತದೆ ಗೋಡೆಗಳ ಮೇಲೆ ಬಿಳಿ ಪುಡಿಯ ಪದರವು ರೂಪುಗೊಳ್ಳುವುದನ್ನು ತೆಡೆಯುತ್ತದೆ ಇದು ತೇವಾಂಶ ಮತ್ತು ಇತರ ಬಾಹ್ಯ ಹವಮಾನದ ಪರಿಣಾಮಗಳ ವಿರುದ್ದ ರಕ್ಷಣೆ ಒದಗಿಸುತ್ತದೆ.

## ಅತ್ಯುನ್ನತ ಬಿಳುಪು

ಗೋಡೆಗಳಿಗೆ ಹೆಚ್ಚು ಹೊಳಪು ಮತ್ತು ಬಿಳಿ ಬಣ್ಣಕ್ಕಾಗಿ, ಸಾಲ್ಟ್ ಬ್ಲಾಕ್ ವಿಶಿಷ್ಟವಾದ ಗೋಡೆಯ ರಕ್ಷಣೆಯನ್ನು ಉನ್ನತ-ಕಾರ್ಯಕ್ಷಮತೆಯ ಪುಟ್ಟಿ ಪದರದೊಂದಿಗೆ ಸಂಯೋಜಿಸುತ್ತದೆ, ಇದು ಶಾಶ್ವತವಾದ ಶಕ್ತಿ ಮತ್ತು ಫಿನಿಶಿಂಗ್ ಅನ್ನು ನೀಡುತ್ತದೆ. ಇದು ನಿಮ್ಮ ಗೋಡೆಗಳನ್ನು ಪ್ರಕಾಶಮಾನವಾಗಿ ಹೊಳೆಯುವಂತೆ ಮಾಡಲು ಮತ್ತು ನಿಮ್ಮ ಮನೆಯನ್ನು ಹೆಚ್ಚು ಸುಂದರಗೊಳಿಸಲು ನಿಮಗೆ ಆಗತ್ಯವಿರುವ ಎಲ್ಲಾ ವೈಶಿಷ್ಟ್ಯಗಳನ್ನು ಇದು ಹೊಂದಿದೆ.

## 1-ವರ್ಷದ ವಾರಂಟಿ

ಎಫ್ಲೋರೆಸೆನ್ಸ್ ಖಾತರಿಯನ್ನು ಹೊಂದಿರುವ ಉದ್ಯಮದಲ್ಲಿ ಏಕೈಕ ಪುಟ್ಟಿ, ಸಾಲ್ಟ್ ಬ್ಲಾಕ್ ನಿಮ್ಮ ಗೋಡೆಗಳನ್ನು ತಾಜಾ ಮತ್ತು ಹೊಸದಾಗಿರಿಸುವ ಜೊತೆಗೆ 1-ವರ್ಷದ ಖಚಿತ ರಕ್ಷಣೆಯನ್ನು ನೀಡುತ್ತದೆ.

## ಇತರ ಪ್ರಮುಖ ಪ್ರಯೋಜನಗಳು ಈ ರೀತಿ ಇವೆ

- ಬಣ್ಣದ ಅಂಟಿಕೊಳ್ಳುವಿಕೆಯನ್ನು ಸುಧಾರಿಸುತ್ತದೆ
- ಸುಲಭ, ವೇಗವಾದ ಅಪ್ಲಿಕೇಶನ್
- ದಹಿಸಲಾಗದ, ಹವಾಮಾನ-ನಿರೋಧಕ
- ನಯವಾದ, ಹೊಳಪುಳ್ಳ ಫಿನಿಶಿಂಗ್
- ಬಿರುಕು-ನಿರೋಧಕ
- ಪರಿಸರ ಸ್ನೇಹಿ, ವಾಸನೆಯಿಲ್ಲ
- ಬಲವಾದ ಮೇಲ್ಮೈ ಬೇಸ್
- ಕ್ಯೂರಿಂಗ್ ಅಗತ್ಯವಿಲ್ಲ
- ಸ್ಪ್ರೇಯರ್‌ಗಳೊಂದಿಗೆ ಬಳಸಬಹುದು

# ತಾಂತ್ರಿಕ ವಿಶೇಷಣಗಳು

| ಅಂಕಿಅಂಶ | ತಾಂತ್ರಿಕ ನಿಯತಾಂಕಗಳು | ವಿಶೇಷಣಗಳು |
|---|---|---|
| 1. | *ವ್ಯಾಪ್ತಿ: 2 ಪದರಗಳು (ಚದರ ಅಡಿ/ಕೆಜಿ) | 17 - 20 |
| 2. | ಪಾಟ್‌ಲೈಫ್ (ಗಂಟೆಗಳು) | ಅಂದಾಜು 3 – 3.5 |
| 3. | ಕರ್ಷಕ ಶಕ್ತಿ @ 28 ದಿನಗಳು (N/mm²) | ≥1.0 |
| 4. | ನೀರಿನ ಕ್ಯಾಪಿಲ್ಲರಿ ಹೀರಿಕೊಳ್ಳುವಿಕೆ (ಮಿಲಿ),<br>30 ನಿಮಿಷ @ 28 ನಿಮಿಷ | ≤0.05 |
| 5. | ಬೃಹತ್ ಸಾಂದ್ರತೆ (g/cm³) | 0.9 to 1.0 |
| 6. | ಮಿಶ್ರಣ ಅನುಪಾತ (ಪ್ರತಿ ಕೆಜಿಗೆ) | 360-380ಮಿಲಿ |
| 7. | ಸಂಕುಚಿತ ಶಕ್ತಿ | ≥ 5.5 N/ mm² |
| 8. | ಬೆಂಕಿಯ ವರ್ಗೀಕರಣ | ದಹನಯೋಗ್ಯವಲ್ಲ |
| 9. | ಶೇಖರಣಾ ಜೀವನ | ತಯಾರಿಕೆಯ ದಿನಾಂಕದಿಂದ<br>12 ತಿಂಗಳುಗಳು,<br>ಒಣ ಮತ್ತು ಸುರಕ್ಷಿತ ಸ್ಥಳದಲ್ಲಿ |

**ಟಿಪ್ಪಣಿ:** *ವಾಸ್ತವಿಕ ಹೊದಿಕೆ ಸಾಮರ್ಥ್ಯವು ಮೇಲ್ಮೈ ಪರಿಸ್ಥಿತಿಗಳು (ವಿನ್ಯಾಸ, ಒರಟುತನ ಮತ್ತು ಸರಂಧ್ರತೆ), ಅನ್ವಯಿಕ ಪರಿಸ್ಥಿತಿಗಳು (ಚಿತ್ರಕಾರ ಕೌಶಲ್ಯ ಮತ್ತು ಅನ್ವಯಿಕ ವಿಧಾನ) ಮತ್ತು ಬಾಹ್ಯ ಅಂಶಗಳನ್ನು (ತಾಪಮಾನ, ಗಾಳಿಯ ವೇಗ, ಇತ್ಯಾದಿ) ಅವಲಂಬಿಸಿ ಬದಲಾಗಬಹುದು.

# ವೃತ್ತಿಪರರಿಂದ ವಿಶ್ವಾಸಾರ್ಹ.

**ವಿಶೇಷ ಪೇಂಟರ್ ಆಫರ್:**

ಪ್ರತಿ 40 ಕೆಜಿ ಪ್ಯಾಕ್ ಖರೀದಿಯ ಮೇಲೆ

**₹180 ನಗದು + ₹20 ಲಾಯಲ್ಟಿ!**



# ವಾರಂಟಿಯ ಪುಟ್ಟಿ

1. **ಇಂಡಸ್ಟ್ರಿಯಲ್ಲಿ ಮೊದಲ ಬಾರಿಗೆ:** ವಾರಂಟಿ ನೀಡುವ ಇಂಡಸ್ಟ್ರೀಯ **ಏಕೈಕ** ಪುಟ್ಟಿ.
2. **ಸಾಟಿಯಿಲ್ಲದ ಭರವಸೆ:** ಇದರ ಜೊತೆ 1-**ವರ್ಷದ** ಎಕ್ಸ್‌ಕ್ಲೂಸಿವ್ ಎಫ್ಲೋರೆಸೆನ್ಸ್ **ವಾರಂಟಿಯೂ** ಸಿಗುತ್ತದೆ.

## ಸಂಪೂರ್ಣವಾಗಿ ಆಟೋಮ್ಯಾಟಿಕ್ ಎರಡು-ಪದರದ ಸೀಲ್ ಪ್ಯಾಕೇಜಿಂಗ್

ಅತ್ಯುತ್ತಮ ಗುಣಮಟ್ಟಕ್ಕಾಗಿ ಡಿಸಾಯಿನ್ ಮಾಡಲಾದ ಸಾಲ್ಟೆ ಬ್ಲಾಕ್ ಒಂದು ಸಂಪೂರ್ಣವಾಗಿ ಆಟೋಮ್ಯಾಟಿಕ್ ಆಗಿದೆ, ಎರಡು-ಪದರದ ಸೀಲ್ಡ್ ಪ್ಯಾಕ್ನಲ್ಲಿ ಬರುತ್ತದೆ, ಇದು ಉತ್ಪನ್ನವನ್ನು ಬಾಹ್ಯ ಮಾಲಿನ್ಯಕಾರಕಗಳಿಂದ ರಕ್ಷಿಸುತ್ತದೆ ಮತ್ತು ಆದರ ಪ್ರೀಮಿಯಂ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತದೆ.

## ಇದು ಯಾಕೇ ಅತೀ ಅಗತ್ಯ

**Dust-Free** — ಪ್ರತಿ ಬಾರಿಯೂ ಶುದ್ಧ, ಕಲುಷಿತವಲ್ಲದ ಪುಟ್ಟಿಯನ್ನು ಖಚಿತಪಡಿಸುತ್ತದೆ.

**Moisture-Free** — ಉಂಡೆ ರಚನೆಯನ್ನು ತಡೆಯುತ್ತದೆ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳುತ್ತದೆ.

**Zero Material Spillage** — ಶೇಖರಣೆ ಮತ್ತು ನಿರ್ವಹಣೆಯ ಸಮಯದಲ್ಲಿ ವಸ್ತು ನಷ್ಟವನ್ನು ತಡೆಯುತ್ತದೆ.

**12 Months Shelf Life** — ಯಾವುದೇ ರಾಜಿ ಇಲ್ಲದೆ ದೀರ್ಘಕಾಲೀನ ಬಳಕೆ ಮಾಡಬಹುದು.



# ವಿವಿಧ ಪ್ರದೇಶಗಳು / ಮೇಲ್ಮೈಗಳ ಮೇಲೆ ಹಚ್ಚುವ ಮಾರ್ಗದರ್ಶಿ

## ಬಿರ್ಲಾ ವೈಟ್ ಸಾಲ್ಟ್ ಬ್ಲಾಕ್ ಆಂಟಿ ಎಫ್ಲೋರೆಸೆನ್ಸ್ ಪುಟ್ಟಿ ವಿವಿಧ ಮೇಲ್ಮೈಗಳಿಗೆ ಹಚ್ಚಬಹುದು, ಉದಾಹರಣೆಗೆ

- ಒಳಾಂಗಣ ಗೋಡೆಗಳು
- ನೆಲಮಾಳಿಗೆಯ ಪ್ರದೇಶಗಳು ಮತ್ತು ಛಾವಣಿಗಳು
- ಬಾಹ್ಯ ಗೋಡೆಗಳು
- ಪುನಃ ಬಣ್ಣ ಬಳಿಯುವುದು/ಹಳೆಯ ಸಿಮೆಂಟಿನ ಮೇಲ್ಮೈಗಳು

# ಸಾಮಾನ್ಯವಾಗಿ ಹಚ್ಚುವ ವಿಧಾನ

**ಮೇಲ್ಮೈ ತಯಾರಿಕೆ**

ಮೊದಲ ಹಂತಗಳಾಗಿ, ಮೇಲ್ಮೈ ದೃಢವಾಗಿದೆ, ಸ್ವಚ್ಛವಾಗಿದೆ ಮತ್ತು ಧೂಳಿನಿಂದ ಮುಕ್ತವಾಗಿದೆ ಎಂದು ಖಚಿತಪಡಿಸಿಕೊಳ್ಳಿ. ಹಚ್ಚುವ ಸಪರಿಯಾದ ಮೇಲೆ ಅಥವಾ ಹತ್ತಿರ ಯಾವುದೇ ಶಿಲೀಂಧ್ರ ತೇಪೆಗಳು ಅಥವಾ ಉಪ್ಪು ನಿಕ್ಷೇಪಗಳಿಲ್ಲ ಎಂದು ಖಚಿತಪಡಿಸಿಕೊಳ್ಳಿ.

**ಪೂರ್ವ-ತೇವಗೊಳಿಸುವಿಕೆ**

ಮೇಲ್ಮೈಯನ್ನು ಸಂಪೂರ್ಣವಾಗಿ ಮೊದಲೇ ತೇವಗೊಳಿಸಿ. ಗಮನವಿಡಿಉತ್ಪನ್ನವು ಪರಿಣಾಮಕಾರಿಯಾಗಿ ಕೆಲಸ ಮಾಡಲು, ಹಚ್ಚುವಾಗ ಉದ್ದಕ್ಕೂ ಗೋಡೆಯು ತೇವವಾಗಿರಬೇಕು.

**ಮಿಶ್ರಣ**

1 ಕೆಜಿ ಪುಟ್ಟಿಗೆ 360-380 ಮಿಲಿ ಶುದ್ಧ ನೀರು ಮಿಶ್ರಣ ಮಾಡಿ. ಕ್ರೀಮೀ ಪೇಸ್ಟ್ ಆಗಲು ಮೆಕ್ಯಾನಿಕಲ್ ಅಂದರೆ ಯಾಂತ್ರಿಕ ಸ್ಟಿರರ್ ಅನ್ನು ಬಳಸಲು ಶಿಫಾರಸು ಮಾಡಲಾಗಿದೆ.

**ಹಚ್ಚುವ ರೀತಿ**

ಮೊದಲ ಕೋಟ್ ಅನ್ನು ಏಕಸಮಾನವಾಗಿ ಹಚ್ಚಿರಿ ! ಒಣಗಿದ ನಂತರ, ನಿಧಾನವಾಗಿ ನಯಗೊಳಿಸಿ ತದ ನಂತರ ಎರಡನೇ ಕೋಟ್ ಅನ್ನು ಅನ್ವಯಿಸಿ. ದಯವಿಟ್ಟು ಗಮನಿಸಿ, 2 ಕೋಟ್‌ಗಳ ನಂತರ ಗರಿಷ್ಠ ಒಟ್ಟು ದಪ್ಪವನ್ನು ಸುಮಾರು 1.5 ಮಿಮೀ ನಿರ್ವಹಿಸಬೇಕು !

**ಒಣಗಿಸುವುದು**

ಪ್ರೈಮರ್ ಮತ್ತು ಟಾಪ್ ಕೋಟ್ ಪೇಂಟ್ ಅನ್ನು ಹಚ್ಚುವ ಮೊದಲು ಮೇಲ್ಮೈಯನ್ನು ಸಂಪೂರ್ಣವಾಗಿ ಒಣಗಲು ಬಿಡಿ.

# ಮೇಲ್ಮೈಯ ತಯಾರಿಕೆ

### ಹೊಸದಾಗಿ ಪ್ಲಾಸ್ಟರ್ ಮಾಡಿದ ಮೇಲ್ಮೈ

ಸಾಲ್ಟ್ ಬ್ಲಾಕ್ ಆಂಟಿ ಎಫ್ಲೋರೆಸೆನ್ಸ್ ಪುಟ್ಟಿ ಹಚ್ಚುವ ಮೊದಲು, ಹೊಸ ಪ್ಲಾಸ್ಟರ್ ಅನ್ನು ಕನಿಷ್ಠ 28 ದಿನಗಳವರೆಗೆ ಅಗತ್ಯವಾಗಿ ಒಣಗಲು ಬಿಡಬೇಕು. ಮೇಲ್ಮೈ ಗಟ್ಟಿಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ. ಒಂದುವೇಳೆ ಮೇಲ್ಮೈಯಲ್ಲಿ ಕೊಳಕು, ಧೂಳು, ಮರಳಿನ ಕಣಗಳು ಅಥವಾ ಶಿಲೀಂಧ್ರಗಳಿದ್ದರೆ, ಅವುಗಳನ್ನು ತೆಗೆದುಹಾಕಲು ನೀರು ಮತ್ತು ವೈರ್ ಬ್ರಷ್/ಪುಟ್ಟಿ ಬ್ಲೇಡ್ ಬಳಸಿ ಚೆನ್ನಾಗಿ ತೊಳೆಯಿರಿ.

### ಹಳೆಯ ಬಣ್ಣ ಬಳಿದ ಮೇಲ್ಮೈ

- ಯಾವುದೇ ಫ್ಲೇಕಿಂಗ್ ಅಥವಾ ಸಿಪ್ಪೆ ಸುಲಿಯುವ ಪೇಂಟ್, ಧೂಳು, ಕೊಳಕು ಮತ್ತು ಕಸಗಳನ್ನು ತೆಗೆದುಹಾಕಲು ಸ್ಕ್ರಾಪರ್, ವೈರ್ ಬ್ರಷ್ ಅಥವಾ ಸೂಕ್ತವಾದ ಸ್ಯಾಂಡ್ ಪೇಪರ್ ಬಳಸಿ. ಹೊಳಪು ಅಥವಾ ರಂಧ್ರಗಳಿಲ್ಲದ ಮೇಲ್ಮೈಗಳಿಗೆ, ಮೇಲ್ಮೈಗೆ ಒರಟು ಫಿನಿಶಿಂಗ್ ನೀಡಲು ಸ್ಯಾಂಡ್ ಪೇಪರ್ ಬಳಸಿ.
- ನೀರು ಮತ್ತು ವೈರ್ ಬ್ರಷ್/ಸೂಕ್ತವಾದ ಎಮೆರಿ ಪೇಪರ್/ಪುಟ್ಟಿ ಬ್ಲೇಡ್ ಬಳಸಿ ಶಿಲೀಂಧ್ರದ ಯಾವುದೇ ಕುರುಹುಗಳನ್ನು ತೆಗೆದುಹಾಕಿ.
- ಮೇಲ್ಮೈಯನ್ನು ಸ್ವಚ್ಛಗೊಳಿಸಿದ ನಂತರ, ಬಿರುಕುಗಳನ್ನು ತುಂಬಲು ಬಿರ್ಲಾ ವೈಟ್ ಕ್ರ್ಯಾಕ್‌ಎಂಡ್ ಕ್ರ್ಯಾಕ್ ಫಿಲ್ಲರ್ ಬಳಸಿ.
- ಸಿಮೆಂಟಿನ ಮೇಲ್ಮೈ ದುರ್ಬಲವಾಗಿದ್ದರೆ, ಆ ಮೇಲ್ಮೈಯನ್ನು ತೆಗೆದು ಬಿರ್ಲಾ ವೈಟ್ ಲೆವೆಲ್ ಪ್ಲಾಸ್ಟ್ ಬಳಸಿ ಅದರ ದುರಸ್ತಿ ಮಾಡಬೇಕು.

### ಎಫ್ಲೋರೆಸೆನ್ಸ್ ಹೊಂದಿರುವ ಮೇಲ್ಮೈ /ಸಬ್‌ಸ್ಟ್ರೇಟ್ (ಹಳೆಯ ಮತ್ತು ಹೊಸ ನಿರ್ಮಾಣ ಎರಡೂ)

- ಎಫ್ಲೋರೆಸೆನ್ಸ್ ಸ್ವಚ್ಛಗೊಳಿಸುವ ಮೊದಲು, ಎಲ್ಲಕ್ಕಿಂತ ಮೊದಲು ಸ್ಕ್ರಾಪರ್, ವೈರ್ ಬ್ರಷ್ ಅಥವಾ ಸೂಕ್ತವಾದ ಮರಳು/ಎಮೆರಿ ಪೇಪರ್ ಸಹಾಯದಿಂದ ಚಕ್ಕೆ ಚಕ್ಕೆಯಾಗಿ ಏಳುವ ಪೇಂಟ್, ಧೂಳು, ಕೊಳಕು ಮತ್ತು ಕಸಗಳನ್ನು ತೊಲಗಿಸಿ.
- ಮೇಲ್ಮೈಗೆ ಒಂದು ಮೈಲ್ಡ್ ಎಸಿಡಿಕ್ ಸೊಲ್ಯೂಶನ್ (1-ಭಾಗ ಹೈಡ್ರೋಕ್ಲೋರಿಕ್ ಆಸಿಡ್ ಮತ್ತು 10-ಭಾಗ ನೀರು) ಅಥವಾ ಎಫ್ಲೋರೆಸೆನ್ಸ್ ರಿಮೂವರ್ ನಿಂದ ಸ್ವಚ್ಛ ಮಾಡಿ ಯಾಕೆಂದರೆ ಜಮೆಯಾದ ಉಪ್ಪು ನಿಕ್ಷೇಪಗಳನ್ನು ಕರಗಿಸಿ ತೆಗೆದುಹಾಕಲು ಸಾಧ್ಯವಾಗಲೀಂತ ಈ ಲಘು ಎಸಿಡಿಕ್ ದ್ರಾವಣ ಅಥವಾ ಎಫ್ಲೋರೆಸೆನ್ಸ್ ರಿಮೂವರ್ ಅನ್ನು ಪ್ರಭಾವಿತ ಜಾಗಕ್ಕೆ ಬ್ರಶ್‌ನ ಸಹಾಯದಿಂದ ನಿಧಾನವಾಗಿ ಹಚ್ಚಿ.
- ಎಫ್ಲೋರೆಸೆನ್ಸ್ ನಿಕ್ಷೇಪಗಳನ್ನು ತೆಗೆದುಹಾಕಿದ ನಂತರ, ಆ ಜಾಗವನ್ನು ಶುದ್ಧ ನೀರಿನಿಂದ ಚೆನ್ನಾಗಿ ತೊಳೆಯಿರಿ, ಇದರಿಂದಾಗಿ ಶುಚಿಗೊಳಿಸುವ ಪ್ರಕ್ರಿಯೆಯಲ್ಲಿ ಉಳಿದಿರುವ ಯಾವುದೇ ಏಸಿಡ್‌ನ ಶೇಷ ಹೋಗಲೀ ಅಂತ.
- ಮೇಲ್ಮೈಯನ್ನು ಸ್ವಚ್ಛಗೊಳಿಸಿದ ನಂತರ, 5-7 ಮಿಮೀ ನಷ್ಟು ಇರುವ ಬಿರುಕುಗಳನ್ನು ತುಂಬಲು ಬಿರ್ಲಾ ವೈಟ್ ಕ್ರ್ಯಾಕ್‌ಎಂಡ್ ಕ್ರ್ಯಾಕ್ ಫಿಲ್ಲರ್ ಬಳಸಿ.
- ಒಂದುವೇಳೆ ಸಿಮೆಂಟಿನ ಆಧಾರ ದುರ್ಬಲವಾಗಿದ್ದರೆ, ಮೇಲ್ಮೈಯನ್ನು ತೆಗೆದುಹಾಕಿ ಬಿರ್ಲಾ ವೈಟ್ ಲೆವೆಲ್ ಪ್ಲಾಸ್ಟ್ ಬಳಸಿ ಅದರ ದುರಸ್ತಿ ಮಾಡಬೇಕು.

*ದಯವಿಟ್ಟು ಗಮನಿಸಿ: ಸೈಟ್/ಮೇಲ್ಮೈಯಲ್ಲಿ ಯಾವುದೇ ತೇವಾಂಶ, ಲೀಕೇಜ್, ತೇವ, ಸೋರಿಕೆ ಅಥವಾ ನೀರಿನ ಒಳಹರಿವಿನ ಯಾವುದೇ ಸಮಸ್ಯೆಗಳಿಗೆ ಪರಿಹಾರ ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿ ಹಚ್ಚುವ ಮೊದಲು ಸಂಸ್ಕರಿಸಬೇಕು. ಉತ್ತಮ ಮೇಲ್ಮೈ ಸ್ಥಿತಿ ಖಚಿತಪಡಿಸಲು ತೇವಾಂಶ, ಲೀಕೇಜ್, ತೇವ, ಸೋರಿಕೆ ಅಥವಾ ನೀರಿನ ಒಳಹರಿವಿನ ಯಾವುದೇ ಸಮಸ್ಯೆಗಳಿಗೆ ಪರಿಹಾರ ಬಿರ್ಲಾ ವೈಟ್ ಸೀಪ್‌ಗಾರ್ಡ್ ವಾಟರ್‌ಪ್ರೂಫಿಂಗ್ ಅನ್ನು ಉಪಯೋಗಿಸುವ ಶಿಫಾರಸು ಮಾಡಲಾಗಿದೆ.*

## ಬೇಸ್ ಅನ್ನು ಮೊದಲೇ ತೇವಗೊಳಿಸಬೇಕು

**ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿ ಹಚ್ಚುವ ಮೊದಲು ಮೇಲ್ಮೈಯನ್ನು ಒದ್ದೆಯಾಗಿಸಿ ಎಲ್ಲಕ್ಕಿಂತ ಉತ್ತಮ ಮೃದುತ್ವ ಕೆಲಸ ಮಾಡಲು ಸುಲಭ ಆಗುವಂತೆ ಮಾಡಿ ಕವರೇಜ್ ಮತ್ತು ಮೇಲ್ಮೈಯೊಂದಿಗೆ ಸದೃಢ ಹಿಡಿತ ಸಿಗುತ್ತದೆ! ಮೇಲ್ಮೈಯನ್ನು ಒದ್ದೆ ಮಾಡಲು ಬ್ರಶ್ ಅನ್ನು ಬಳಸಬಹುದು, ಅಥವಾ ಹೋಸ್‌ಪೈಪ್ ನಿಂದ ನೀರನ್ನು ಸ್ಪ್ರೇ ಮಾಡಬಹುದು ಅಥವಾ ಮಗ್‌ನಿಂದ ನೀರನ್ನು ಹರಯೂ ಕೂಡ ಒದ್ದೆ ಮಾಡಬಹುದು.**

## ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿಯ ಮಿಶ್ರಣ

**1** ನಿಧಾನವಾಗಿ 1 ಕೆಜಿ ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿಯಲ್ಲಿ 36-38% ಶುದ್ಧ ನೀರು ಸೇರಿಸಿ (1 ಕೆಜಿ ಪುಟ್ಟಿ + 360- 380 ಮಿಲಿ ನೀರು) ಬೆರೆಸಿ ಪೇಸ್ಟ್ ತಯಾರಿಸಿ. ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿಯನ್ನು ನೇರವಾಗಿ ನೀರಿಗೆ ಹಾಕಬೇಡಿ.

**2** ಮಿಶ್ರಣವನ್ನು ಒಂದು ಕ್ರೀಮೀ ದಪ್ಪದಷ್ಟು ಮಾಡಿ ಅದಕ್ಕಾಗಿ ನೀವು ಮೆಕ್ಯಾನಿಕಲ್ ಸ್ಟಿರರ್ ನ ಸಹಾಯದಿಂದ 3-5 ನಿಮಿಷಗಳ ಮಿಶ್ರಣ ಮಾಡಿದರೆ ಉತ್ತಮವಾಗಿರುತ್ತದೆ.

**3** ಅತ್ಯುತ್ತಮ ಫಲಿತಾಂಶಗಳನ್ನು ಪಡೆಯಲು ಸಂಪೂರ್ಣವಾಗಿ ಒಳ್ಳೆಯ ರೀತಿಯಿಂದ ಮಿಶ್ರಣ ಮಾಡಿದ ನಂತರ ಪೇಸ್ಟ್ ಅನ್ನು 5 ನಿಮಿಷಗಳ ಕಾಲ ಹಾಗೇ ಬಿಡಿ. ತಯಾರಾದ ಪೇಸ್ಟ್ ಅನ್ನು 3 ರಿಂದ 3.5 ಗಂಟೆಗಳ ಒಳಗೆ ಬಳಸಬೇಕು.

# ಸಬ್‌ಸ್ಟ್ರೇಟ್ /ಮೇಲ್ಮೈ ಮೇಲೆ ಹಚ್ಚುವ ವಿಧಾನಗಳು

1. ಸಂಪೂರ್ಣವಾಗಿ ಒಳ್ಳೆಯ ರೀತಿಯಿಂದ ಮಿಶ್ರಣ ಮಾಡಿದ ನಂತರ, ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿಯ ಮೊದಲ ಕೋಟ್ ಅನ್ನು ಮೊದಲೇ ತೇವಗೊಳಿಸಿದ ಗೋಡೆ/ ಮೇಲ್ಮೈಯಲ್ಲಿ ಪುಟ್ಟಿ ಬ್ಲೇಡ್‌ನ ಸಹಾಯದಿಂದ ಏಕಸಮಾನವಾಗಿ ಹಚ್ಚಿರಿ. ಸಬ್‌ಸ್ಟ್ರೇಟ್‌ನ ಮೇಲ್ಮೈ ತಾಪಮಾನವು 40 ಡಿಗ್ರಿ ಸೆಂಟಿಗ್ರೇಡ್‌ಗಿಂತ ಹೆಚ್ಚಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ.

2. ಪುಟ್ಟಿಯ ಮೊದಲ ಕೋಟ್ ಅನ್ನು ಒಣಗಿಸಿದ ನಂತರ, ಮೇಲ್ಮೈ ಮೇಲೆ ಯಾವುದೇ ಸಡಿಲವಾದ ಕಣಗಳಿದ್ದರೆ ಅದನ್ನು ತೆಗೆದುಹಾಕಲು ಒದ್ದೆಯಾದ ಸ್ಪಾಂಜ್ ಅಥವಾ ಪುಟ್ಟಿ ಬ್ಲೇಡಿನಿಂದ ಮೇಲ್ಮೈಯನ್ನು ನಿಧಾನವಾಗಿ ಉಜ್ಜಿಕೊಳ್ಳಿ.

3. ಮೇಲ್ಮೈಯನ್ನು ಕನಿಷ್ಠ 3-4 ಗಂಟೆಗಳ ಕಾಲ ಒಣಗಲು ಹಾಗೇಬಿಡಿ ತದನಂತರ ಮತ್ತೆ ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿಯ ಎರಡನೇ ಕೋಟ್ ಅನ್ನು ಹಚ್ಚಿರಿ.

4. ಹವಾಮಾನ ಪರಿಸ್ಥಿತಿಗಳನ್ನು ಅವಲಂಬಿಸಿ ಮೇಲ್ಮೈಯನ್ನು 24 ಗಂಟೆಗಳ ಅಥವಾ ಅದಕ್ಕಿಂತ ಹೆಚ್ಚು ಕಾಲ ಒಣಗಲು ಬಿಡಿ. ನಂತರ ಪ್ರೈಮರ್ ಮತ್ತು ಟಾಪ್ಕೋಟ್ ಪೇಂಟ್/ಡಿಸ್ಟೆಂಪರ್ ಅನ್ನು ಹಚ್ಚಿರಿ.

5. ಪುಟ್ಟಿಯ ಅಂತಿಮ ಕೋಟ್‌ನ ಮೇಲ್ಮೈಯನ್ನು ದೊಡ್ಡ ಒರಟಾದ ಎಮೆರಿ ಪೇಪರ್‌ನಿಂದ ಬಲವಾಗಿ ಉಜ್ಜಲು ಶಿಫಾರಸು ಮಾಡುವುದಿಲ್ಲ, ಏಕೆಂದರೆ ಇದರಿಂದಾಗಿ ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿಯ ಎಫ್ಲೋರೆಸೆನ್ಸ್ ರೆಸಿಸ್ಟೆನ್ಸ್ ಗುಣವು ಮುಗಿಯುತ್ತದೆ. ಒಂದು ವೇಳೇ ಮೇಲ್ಮೈ ಮೇಲೆ ಏರು ಪೇರು ತೇಪೆಗಳನ್ನು ತೆಗೆದುಹಾಕುವ ಅಗತ್ಯವಿದ್ದರೆ, ಕನಿಷ್ಠ 500 ಗ್ರಿಟ್ ನ ಅತ್ಯಂತ ತೆಳುವಾದ ಎಮೆರಿ ಕಾಗದದಿಂದ ಮೇಲ್ಮೈಯನ್ನು ಸಮತಲಗೊಳಿಸಿ.

6. ಎರಡೂ ಪದರಗಳ ಒಟ್ಟು ದಪ್ಪವು ಗರಿಷ್ಠ 1.5 ಮಿಮೀಗೆ ಸೀಮಿತವಾಗಿರಬೇಕು.

*ದಯವಿಟ್ಟು ಗಮನಿಸಿ: ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿ ಹಚ್ಚುವ ಕೆಲಸ ಪೂರ್ತಿಯಾದ ನಂತರ, ಬಾಹ್ಯ ಕಾರಣಗಳಿಂದಾಗಿ ಗೋಡೆಯ ಯಾವುದೇ ಬದಿಗಳಿಂದ ಯಾವುದೇ ಸೋರಿಕೆ ಇರಬಾರದು.*

# ಏನು ಮಾಡಬೇಕು ಮತ್ತು ಏನು ಮಾಡಬಾರದು

## ಏನು ಮಾಡಬೇಕು

- ಹಚ್ಚುವ ಮೊದಲು, ಮೇಲ್ಮೈ ಸ್ವಚ್ಛವಾಗಿದೆಯೇ ಮತ್ತು ಯಾವುದೇ ಸಡಿಲವಾಗಿ ಅಂಟಿಕೊಂಡಿರುವ ವಸ್ತುವನ್ನು ತೆಗೆದುಹಾಕಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ
- ಹಚ್ಚುವ ಮೊದಲು ಯಾವಾಗಲೂ ಮೇಲ್ಮೈಯನ್ನು ಒದ್ದೆ ಮಾಡಿ
- ಏಕಸಮಾನ ಸ್ಥಿರತೆಯನ್ನು ಪಡೆಯಲು ಅದನ್ನು ಚೆನ್ನಾಗಿ ಮಿಶ್ರಣ ಮಾಡಿ
- ತಯಾರು ಮಾಡಿದಂತಹ ಮಿಶ್ರಣವನ್ನು 3 ರಿಂದ 3.5 ಗಂಟೆಗಳ ಒಳಗೆ ಬಳಸಿ.
- ಆಸಿಡಿಕ್ ದ್ರಾವಣವನ್ನು ತಯಾರಿಸಲು ಯಾವಾಗಲೂ ನೀರಿಗೆ ಆಸಿಡ್ ಅನ್ನು ಸೇರಿಸಿ, ಅದರ ವಿರುದ್ಧವಾಗಿ ಮಾಡಬೇಡಿ.
- ಹಚ್ಚುವ ಸಮಯದಲ್ಲಿ ಸುರಕ್ಷತಾ ಕನ್ನಡಕಗಳನ್ನು ಧರಿಸಿ. ಒಂದು ವೇಳೆ ಕಣ್ಣುಗಳಿಗೆ ಬಿದ್ದರೆ ಅಂತಹ ಸಂದರ್ಭದಲ್ಲಿ, ತಕ್ಷಣ ಸಾಕಷ್ಟು ನೀರಿನಿಂದ ತೊಳೆಯಿರಿ ಮತ್ತು ವೈದ್ಯಕೀಯ ಸಲಹೆಯನ್ನು ಪಡೆಯಿರಿ.
- ಸ್ಯಾಂಡಿಂಗ್ ಮತ್ತು ಮೇಲ್ಮೈ ತಯಾರಿಸುವ ಸಮಯದಲ್ಲಿ ಧೂಳು ಉಸಿರಿನ ಮೂಲಕ ಹೋಗದಂತೆ ಒಂದು ಸೂಕ್ತವಾದ ನೋಸ್ ಮಾಸ್ಕ್ ಅನ್ನು ಹಾಕಿಕೊಳ್ಳುವ ಶಿಫಾರಸು ಮಾಡಲಾಗಿದೆ.
- ಒಂದು ವೇಳೇ ತ್ವಚೆಯಲ್ಲಿ ಉರಿ ಉಂಟಾದರೆ ಅಥವಾ ಹಾಗೇ ಮುಂದುವರಿದರೆ, ತಕ್ಷಣ ತ್ವಚೆಯನ್ನು ಸಾಕಷ್ಟು ನೀರಿನಿಂದ ತೊಳೆಯಿರಿ. ಅಗತ್ಯವಿದ್ದರೆ ತಕ್ಷಣ ವೈದ್ಯಕೀಯ ಸಹಾಯ ಪಡೆಯಿರಿ
- ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿಯ ಅಂತಿಮ ಕೋಟ್ ಹಚ್ಚಿದ ನಂತರ, ಪ್ರೈಮರ್ ಮತ್ತು ಟಾಪ್ ಕೋಟ್ ಪೇಂಟ್/ಡಿಸ್ಟೆಂಪರ್ ಅನ್ನು 30 ದಿನಗಳಲ್ಲಿ ಹಚ್ಚಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ
- ಇದನು ತಂಪಾದ ಮತ್ತು ಒಣ ಸ್ಥಳದಲ್ಲಿ ಇಡಿ

## ಏನು ಮಾಡಬಾರದು

- ಶಿಫಾರಸು ಮಾಡಿದ್ದಕ್ಕಿಂತ ಹೆಚ್ಚು ನೀರು ಸೇರಿಸಬೇಡಿ
- ತೇವ, ಸೋರುವ ಅಥವಾ ತೇವಾಂಶ ಪೀಡಿತ ಮೇಲ್ಮೈಗಳಿಗೆ ಹಚ್ಚಬೇಡಿ
- ಮೇಲ್ಮೈ ತೇವಾಂಶವು 12% ಹೆಚ್ಚು ಇದ್ದಾಗ, ಇದನ್ನು ಹಚ್ಚಬೇಡಿ
- ಅಂತಿಮ ಕೋಟ್ ಅನ್ನು ಯಾವುದೇ ಒರಟಾದ ಎಮೆರಿ ಪೇಪರ್‌ನಿಂದ ಜೋರಾಗಿ ಉಜ್ಜಬೇಡಿ
- ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿ ಸೇವಿಸಬೇಡಿ.ತಪ್ಪಾಗಿ ಸೇವಿಸಿದ ಸಂದರ್ಭದಲ್ಲಿ, ತಕ್ಷಣ ವೈದ್ಯಕೀಯ ಸಹಾಯ ಪಡೆಯಿರಿ
- ಬಿರ್ಲಾ ವೈಟ್ ಸಾಲ್ಟ್ ಬ್ಲಾಕ್ ಆಂಟಿ-ಎಫ್ಲೋರೆಸೆನ್ಸ್ ಪುಟ್ಟಿಯನ್ನು ಮಕ್ಕಳ ಕೈಗೆ ಎಟಕದಂತೆ ದೂರ ಇಡಿ

Birla White

# SALT BLOCK

## ANTI-EFFLORESCENCE PUTTY

ಇನ್ನಷ್ಟು ತಿಳಿದುಕೊಳ್ಳಲು
ಕೋಡ್ ಸ್ಕ್ಯಾನ್ ಮಾಡಿ


**ಬಿರ್ಲಾ ವೈಟ್ - ಆ ಯುನಿಟ್ ಆಫ್ ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್,**

9ನೇ ಮಹಡಿ, ಬಿರ್ಲಾ ಸೆಂಚುರಿಯನ್, ಪಾಂಡುರಂಗ್ ಬುಧ್ಕರ್ ಮಾರ್ಗ, ವರ್ಲಿ, ಮುಂಬೈ-400030

ದೂರವಾಣಿ ಬೋರ್ಡ್ ಸಂಖ್ಯೆಗಳು: 022-68540444 / 50365111

ವೆಬ್‌ಸೈಟ್: www.birlawhite.com | ಟೋಲ್ ಫ್ರೀ ನಂಬರ್: 1800 11 1717

www.facebook.com/BirlaWhiteCement | X.com/BirlaWhite

bw-consumercare@adityabirla.com